# UDP-0005

GSTIN : 29AAAAG2286M1ZB

PAN : AAAAG2286M   TAN : BLRG03478G

# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನೋಂದಣಿ ಸಂಖ್ಯೆ 552, ಕಟ್ಟಡ ಸಂಖ್ಯೆ: 5–215

ರಥಬೀದಿ ಸಮೀಪ, ಮುಖ್ಯರಸ್ತೆ, ಗಂಗೊಳ್ಳಿ – 576 216

ಸಂಸ್ಥಾಪಕರು



ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್

104

1920-2024

ಸ್ಥಾಪನೆ : 1920



# 104ನೇ ಸಾಮಾನ್ಯ ಸಭೆ

ಮತ್ತು

# ವಾರ್ಷಿಕ ವರದಿ 2023–24

ಆದಿತ್ಯವಾರ, ಸಪ್ಟೆಂಬರ್ 15, 2024

ಪೂರ್ವಾಹ್ನ 11–00 ಗಂಟೆಗೆ

ಸ್ಥಳ : ಶ್ರೀ ವೀರ ವಿಠಲ ಸಭಾಗೃಹ, ಶ್ರೀ ವಿಠಲ ರಖುಮಾಯಿ ದೇವಸ್ಥಾನ, ಗಂಗೊಳ್ಳಿ
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

# ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್


ವೆಬ್ ಸೈಟ್ : www.gangulitownsouharda.com

ಇ-ಮೈಲ್ : gangulitownsouharda@gmail.com


| | | |
|---|---|---|
| ನೋಂದಾಯಿತ ಕಚೇರಿ ಮತ್ತು ಗಂಗೊಳ್ಳಿ ಶಾಖೆ | : | ಕಟ್ಟಡ ಸಂಖ್ಯೆ-5-215<br>ರಥಬೀದಿ ಸಮೀಪ, ಮುಖ್ಯ ರಸ್ತೆ,<br>ಗಂಗೊಳ್ಳಿ-576 216<br>ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |
| ದೂರವಾಣಿ | : | ಮುಖ್ಯ ಕಾರ್ಯನಿರ್ವಾಹಕ : 8147355477<br>ಪ್ರಧಾನ ಕಛೇರಿ : 08254-265459, 8147355476 |
| ನೋಂದಣಿ ಸಂಖ್ಯೆ | : | ಎ.ಆರ್/552/02-03 ದಿನಾಂಕ 07/01/2003 |
| ಕಾರ್ಯಕ್ಷೇತ್ರ | : | ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹೈಕಾಡಿ ಗ್ರಾಮವನ್ನು ಹೊರತುಪಡಿಸಿ ಉಡುಪಿ ಜಿಲ್ಲಾ ವ್ಯಾಪ್ತಿ |
| ಕೋಟೇಶ್ವರ ಶಾಖೆ | : | ಶಿವಾನಂದ ಕಾಂಪ್ಲೆಕ್ಸ್, ರಥ ಬೀದಿ<br>ಮುಖ್ಯ ರಸ್ತೆ, ಕೋಟೇಶ್ವರ- 576 222<br>ದೂರವಾಣಿ : 08254-263459, 8147355475 |
| ಉಪ್ಪುಂದ ಶಾಖೆ | : | ಆರ್ನವಿ ಕಾಂಪ್ಲೆಕ್ಸ್, ಶಂಕರ ಕಲಾ ಮಂದಿರ ಸಮೀಪ<br>ರಾಷ್ಟ್ರೀಯ ಹೆದ್ದಾರಿ-66, ಉಪ್ಪುಂದ - 576 232<br>ದೂರವಾಣಿ : 08254-256449, 8147355474 |
| ಲೆಕ್ಕ ಪರಿಶೋಧಕರು | : | ಶ್ರೀ ಎ. ಸುದರ್ಶನ ಪೈ<br>ಲೆಕ್ಕಪರಿಶೋಧಕರು<br>ಕೋಟೇಶ್ವರ - 576 222<br>ದೂರವಾಣಿ : 9448953275 |
| ಆಂತರಿಕ ಲೆಕ್ಕ ಪರಿಶೋಧಕರು | : | ಶೆಟ್ಟಿ & ಭಟ್<br>ಲೆಕ್ಕಪರಿಶೋಧಕರು<br>ಉಡುಪಿ 576 101<br>ದೂರವಾಣಿ : 9538736933 |

# ಅಧ್ಯಕ್ಷರ ಮಾತು

ಆತ್ಮೀಯ ಸದಸ್ಯ ಬಾಂಧವರೇ,

ಯಶಸ್ವಿಯಾಗಿ ಶತಮಾನೋತ್ಸವ ಸಂಭ್ರಮವನ್ನು ಆಚರಿಸಿಕೊಂಡ, ಹಲವಾರು ಹಿರಿಯ ಸಹಕಾರಿಗಳು ನಿರ್ದೇಶಕರು, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಈ ಸಂಘದ ಅಧ್ಯಕ್ಷನಾಗುವ ಅವಕಾಶ ಅನಿರೀಕ್ಷಿತವಾಗಿ ನನಗೆ ಲಭಿಸಿದ್ದು ಸಂಸ್ಥಾಪಕರ ಆಶಯ ಹಾಗೂ ಶ್ರೀ ದೇವರ ಅನುಗ್ರಹವೆಂದು ಭಾವಿಸುತ್ತೇನೆ.

ಬದಲಾವಣೆ ಎಂಬುದು ಜಗದ ನಿಯಮ. ಅದು ನಿತ್ಯ ನಿರಂತರ. ನಾವು ಬದಲಾವಣೆಗಳನ್ನು ಸ್ವೀಕರಿಸುತ್ತಾ ಆರ್ಥಿಕ ಸ್ಥಿತಿಗತಿಗಳಿಗೆ ಹೊಂದಿಕೊಂಡು ನಡೆದಾಗ ಮಾತ್ರ ಮಾರುಕಟ್ಟೆಯಲ್ಲಿ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯ. ನಮ್ಮ ಸಂಘವು ಕಾಲ ಕಾಲಕ್ಕೆ ಎಲ್ಲಾ ಬದಲಾವಣೆಗಳಿಗೆ ಹೊಂದಿಕೊಂಡು ಬಂದಿರುವುದರಿಂದ ಇವತ್ತಿಗೂ ಪ್ರಗತಿಯತ್ತವೇ ದಾಪುಗಾಲು ಹಾಕುತ್ತಿದೆ.

ನಿರಂತರ ಬದಲಾಗುವ ಗ್ರಾಹಕರ ನಿರೀಕ್ಷೆಗಳಿಗೆ ಸ್ಪಂದಿಸಲು ನೂತನ ಅವಕಾಶ, ನೂತನ ತಂತ್ರಜ್ಞಾನ, ನೂತನ ಸೇವೆಗಳನ್ನು ಪ್ರಾರಂಭಿಸಲು ನಮ್ಮ ಸಂಘವು ಸದಾ ಸಿದ್ಧವಿದೆ. ಕಳೆದ 5 ವರ್ಷಗಳಿಂದ ಸಂಘವು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿದ್ದು, ಸಂಘದ ಯಾವುದೇ ಶಾಖೆಯಿಂದ ವ್ಯವಹರಿಸಲು ಅವಕಾಶ ಕಲ್ಪಿಸಲಾಗಿದೆ.

"ವಸುದೈವ ಕುಟುಂಬಕಮ್" ಎನ್ನುವ ಭವ್ಯ ಪರಂಪರೆಯನ್ನು ಹೊಂದಿರುವ ನಮ್ಮ ಸಂಘವು, ಕೇವಲ ಲಾಭ ಗಳಿಸುವ ಆರ್ಥಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೆ ಸಮಾಜದ ಬೆಳವಣಿಗೆಗೂ ಮಹತ್ತರ ಕೊಡುಗೆ ನೀಡುತ್ತಿದೆ.

ಸಂಘವು ಕಳೆದ 17 ವರ್ಷಗಳಿಂದ ಸಂಸ್ಥಾಪಕರನ್ನು ಸ್ಮರಿಸುವ ಜೊತೆಗೆ ಸಹಕಾರವೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 40 ಕ್ಕೂ ಅಧಿಕ ಗಣ್ಯರನ್ನು ಗುರುತಿಸಿ ಗೌರವಿಸಿದೆ. ವೈದ್ಯರ ದಿನಾಚರಣೆ, ಶಿಕ್ಷಕರ ದಿನಾಚರಣೆ, ಅಂಚೆ ದಿನಾಚರಣೆ, ಮಹಿಳಾ ದಿನಾಚರಣೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸಮಾಜದ ಸಕಲ ವರ್ಗದ ಜನರ ಸೇವೆಯನ್ನು ಗುರುತಿಸಿ ಗೌರವಿಸಿದ ಹೆಮ್ಮೆ ನಮ್ಮ ಸಂಘದ್ದು. ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆದ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರ, ರಕ್ತದಾನ ಶಿಬಿರ, ನೇತ್ರ ಚಿಕಿತ್ಸಾ ಶಿಬಿರಗಳು, ಗ್ರಾಮ ಪಂಚಾಯತ್‌ನ ಬೀದಿ ದೀಪಗಳ ನಿರ್ವಹಣೆ ನಮ್ಮ ಸಂಘದ ಸೇವಾ ಕಾರ್ಯಗಳಲ್ಲಿ ಪ್ರಮುಖವಾದವು.

ಶಿಕ್ಷಣ ಕ್ಷೇತ್ರಕ್ಕೆ ನಮ್ಮ ಸಂಘದ ಸೇವೆ ನಿರಂತರ. ಪ್ರತಿ ಸಾಲಿನಲ್ಲಿ ಕಾರ್ಯವ್ಯಾಪ್ತಿಯ ಶಾಲಾ-ಕಾಲೇಜುಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು, ಉತ್ತಮ ಶಿಕ್ಷಕರನ್ನು ಗುರುತಿಸಿ ಗೌರವಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಪರೀಕ್ಷೆ ಎದುರಿಸುವ ಕಲೆ, ಪರೀಕ್ಷಾ ಸಿದ್ಧತೆ, ಸಮಯ ಪಾಲನೆ ಮುಂತಾದ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ನಮ್ಮ ಸಂಸ್ಥೆಗೆ ಸಲ್ಲುತ್ತದೆ.

ಸಹಕಾರ ಕ್ಷೇತ್ರದ ಹಿರಿಯ ಅಧಿಕಾರಿಗಳಾದ ಮೈಸೂರಿನ ಶ್ರೀ ಸಿ. ಎನ್. ಪರಶಿವಮೂರ್ತಿ, ಶಿವಮೊಗ್ಗದ ದಿ. ಶ್ರೀ ಬಿ. ಎ. ಮಹದೇವಪ್ಪ, ಬೆಂಗಳೂರಿನ ಶ್ರೀ ಮಂಜುನಾಥ ಸಿಂಗ್‌ರಂತಹ ಸಹಕಾರದ ಜ್ಞಾನ ಭಂಡಾರಗಳಿಂದ ತರಬೇತಿ, ಮಾಹಿತಿ ಹಾಗೂ ಅನುಭವವನ್ನು ಪಡೆದ ನಮ್ಮ ಸಿಬ್ಬಂದಿಗಳು ನಿಜಕ್ಕೂ ಪುಣ್ಯವಂತರು.

ರಾಜ್ಯ ಮಟ್ಟದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ, ಅಧ್ಯಕ್ಷರಿಗೆ ರಾಜ್ಯಮಟ್ಟದ ಶ್ರೇಷ್ಠ ಸಹಕಾರಿ, ಮುಖ್ಯ ಕಾರ್ಯನಿರ್ವಾಹಕರಿಗೆ ಅತ್ಯುತ್ತಮ ಕಾರ್ಯನಿರ್ವಾಹಕ ಗೌರವ ದೊರಕಿರುವುದು ನಮ್ಮ ಸಂಘದ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

ಕಳೆದ 25 ವರ್ಷಗಳಿಂದ ನಿರಂತರ ಲಾಭ ಗಳಿಸಿ ಸದಸ್ಯರಿಗೆ ಲಾಭಾಂಶ ನೀಡುತ್ತಿರುವ ಸಂಘವು ಕಳೆದ 3 ವರ್ಷಗಳಿಂದ 1 ಕೋಟಿಗೂ ಅಧಿಕ ಲಾಭ ಗಳಿಸುತ್ತಿದೆ. ಸಹಕಾರಿಯ ಬೆಳವಣಿಗೆಗೆ ಸದಸ್ಯರ ಭಾಗಹಿವಿಸುವಿಕೆ ಬಹಳ ಮುಖ್ಯವಾದದ್ದು. ಸಂಘದ ಬೆಳವಣಿಗೆಗೆ ಎಲ್ಲಾ ಸದಸ್ಯರ ಸಹಭಾಗಿತ್ವವನ್ನು ನಿರೀಕ್ಷಿಸುತ್ತಿದ್ದೇವೆ. ಸದಸ್ಯರಿಗೆ ನೀಡುತ್ತಿರುವ ಸೇವೆಯ ಗುಣಮಟ್ಟವನ್ನು ಹೆಚ್ಚಿಸಲು ಸದಸ್ಯರ ಸೃಜನಶೀಲ ಯೋಚನೆ ಹಾಗೂ ಕಲ್ಪನೆಗಳನ್ನು ನಾವು ಪ್ರೀತಿಪೂರ್ವಕವಾಗಿ ಗೌರವಿಸುತ್ತೇವೆ.

ಇದುವರೆಗೆ ಸಂಘದ ಬೆಳವಣಿಗೆಗೆ ಸಹಕರಿಸಿದ ಎಲ್ಲಾ ಸದಸ್ಯರಿಗೆ, ನಿರ್ದೇಶಕರಿಗೆ, ಮಾಜಿ ನಿರ್ದೇಶಕರಿಗೆ, ಪಿಗ್ಮಿ ಸಂಗ್ರಾಹಕರಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರೀತಿಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಕ್ಷತೆಯಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬಹುದಾದ ಎಲ್ಲಾ ಅಭಿವೃದ್ಧಿಪರ ಕಾರ್ಯಗಳಿಗೆ ತಮ್ಮೆಲ್ಲರ ತುಂಬು ಹೃದಯದ ಸಹಕಾರವನ್ನು ಕೋರುತ್ತಾ ಸಂಘದ 104 ನೇ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ಜೈ ಸಹಕಾರ್

**ಶುಭಾಶಯಗಳೊಂದಿಗೆ**

**ಶ್ರೀ ಜಿ. ವೆಂಕಟೇಶ ಶೆಣೈ**
(ಅಧ್ಯಕ್ಷರು)

# ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

**ಮಾನ್ಯರೇ,**

**ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು 15–09–2024ನೇ ಆದಿತ್ಯವಾರ ಪೂರ್ವಾಹ್ನ 11 ಗಂಟೆಗೆ ಗಂಗೊಳ್ಳಿಯ ಶ್ರೀ ವಿಠಲ ರಖುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ನಡೆಯಲಿದೆ. ತಾವು ಈ ಸಭೆಗೆ ಆಗಮಿಸಬೇಕಾಗಿ ವಿನಂತಿ.**

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :–**

1. 104ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
2. 10–09–2023 ರಂದು ನಡೆದ 103ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.
3. 2023–24ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.
4. 2023–24ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.
5. 2023–24ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.
6. 2023–24ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.
7. 2024–25ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.
8. 2023–24ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.
9. 2024–25ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
10. 2025–26ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.
11. 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.
12. ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.
13. 6 ವರ್ಷ ಮೇಲ್ಪಟ್ಟ ಅನುತ್ಪಾದಕ ವಾಹನ ಖರೀದಿ ಸಾಲಗಳನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.
14. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.

/ಆಡಳಿತ ಮಂಡಳಿಯ ಅನುಮತಿ ಮೇರೆಗೆ/

ಸ್ಥಳ : ಗಂಗೊಳ್ಳಿ
ತಾ. : 19–08–2024

ಸಹಿ/–
ಮುಖ್ಯ ಕಾರ್ಯನಿರ್ವಾಹಕ

**ಸಭೆಯು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಪ್ರಾರಂಭವಾಗಲಿದ್ದು, ಸದಸ್ಯರು 10.45ರ ಮೊದಲು ಸಭಾಂಗಣದಲ್ಲಿ ಉಪಸ್ಥಿತರಿರುವಂತೆ ಕೋರಲಾಗಿದೆ.**

**ಸಭೆಯ ಬಳಿಕ ಸಸ್ಯಾಹಾರಿ ಭೋಜನ ವ್ಯವಸ್ಥೆಗೊಳಿಸಲಾಗಿದೆ.**

## ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಕುರಿತು ಟಿಪ್ಪಣಿ

**01 :– 104ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**

**ಟಿಪ್ಪಣಿ** :– ಸಂಘದ 'ಅ' ವರ್ಗದ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾದ ಸೂಚನಾ ಪತ್ರವನ್ನು ಓದಿ ಅಂಗೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು.

**02:–10–09–2023 ರಂದು ನಡೆದ 103ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**
**ಟಿಪ್ಪಣಿ** :– **103**ನೇ ಸಾಮಾನ್ಯ ಸಭೆಯ ನಡವಳಿಕೆಯನ್ನು ಸ್ವೀಕರಿಸಿ ದೃಢೀಕರಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ನಡವಳಿಕೆಗಳನ್ನು ಪುಸ್ತಕದಲ್ಲಿ ಮುದ್ರಿಸಲಾಗಿದೆ.)

**03 :– 2023–24ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.**
**ಟಿಪ್ಪಣಿ** :– ಸಂಕ್ಷಿಪ್ತ ಆಡಳಿತ ಮಂಡಳಿ ವರದಿಯನ್ನು ಈ ಪುಸ್ತಕದಲ್ಲಿ ನೀಡಲಾಗಿದ್ದು, ಸದ್ರಿ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು.

**04 :– 2023–24ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**
**ಟಿಪ್ಪಣಿ** :– ಸಂಘದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಎ. ಸುದರ್ಶನ ಪೈ ರವರು ನೀಡಿದ **2023–24**ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ದಿನಾಂಕ 19–08–2024 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ತಯಾರಿಸಲಾದ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ ನಿರ್ಣಯ ಕೈಗೊಳ್ಳುವುದು.

**05 :– 2023–24ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**
**ಟಿಪ್ಪಣಿ** :– ಸಂಘದ ಉಪವಿಧಿಗಳಿಗನುಗುಣವಾಗಿ ನಿವ್ವಳ ಲಾಭವನ್ನು ವಿಂಗಡಿಸುವುದು.
ಆಡಳಿತ ಮಂಡಳಿ ವರದಿಯಲ್ಲಿ ವಿವರಿಸಲಾಗಿದೆ.

**06 :– 2023–24ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ**
**ಟಿಪ್ಪಣಿ** :– ವರದಿ ಸಾಲಿನಲ್ಲಿ ಅಂದಾಜು ಮೀರಿದ ಖರ್ಚುಗಳನ್ನು ಪರಿಶೀಲಿಸಿ ಮಂಜೂರಾತಿ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳುವುದು. (ವಿವರ ಲಗತ್ತಿಸಲಾಗಿದೆ)

**07 :– 2024–25ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**
**ಟಿಪ್ಪಣಿ** :– **2024–25**ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು. (ವಿವರ ಲಗತ್ತಿಸಲಾಗಿದೆ)

**08 :– 2023–24ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**

**ಟಿಪ್ಪಣಿ :– 2023–24**ನೇ ಸಾಲಿನಲ್ಲಿ **279** 'ಅ' ವರ್ಗದ ಸದಸ್ಯರು, **3** 'ಬಿ' ವರ್ಗದ ಸದಸ್ಯರ ಸೇರ್ಪಡೆಯಾಗಿದ್ದು, **37** 'ಅ' ವರ್ಗದ ಹಾಗೂ **31** 'ಬಿ' ವರ್ಗದ ಸದಸ್ಯರು ಸದಸ್ಯತ್ವವನ್ನು ತ್ಯಜಿಸಿದ್ದು ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

**09 :– 2024–25ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ :–** ಕುಂದಾಪುರದ ಸಿ.ಎ. ಎನ್. ಶಾಂತಾರಾಮ ನಾಯಕ್‌ರವರ ನೇಮಕಾತಿಗೆ ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

**10 :– 2025–26ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಶುಲ್ಕ ನಿಗದಿ.**

**ಟಿಪ್ಪಣಿ :–** ಉಡುಪಿಯ ಸಿ.ಎ. ಜಯಲಕ್ಷ್ಮೀ ಕಾಮತ್‌ರವರ ನೇಮಕಾತಿಗೆ ಆಡಳಿತ ಮಂಡಳಿ ಶಿಫಾರಸ್ಸು ಮಾಡಿದೆ.

**11 :– 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ಟಿಪ್ಪಣಿ :– 2024–25**ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ ನಿರ್ಣಯ. (ವಿವರ ಲಗತ್ತಿಸಲಾಗಿದೆ)

**12 :–ಮೀಸಲು ಹಾಗೂ ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

**ಟಿಪ್ಪಣಿ :–** ವರದಿ ಸಾಲಿನಲ್ಲಿ ಶಿಕ್ಷಣ ನಿಧಿಗೆ ರೂ. 2,04,228/– ಪಾವತಿ ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ರೂ. 2,08,501/–ನ್ನು ವ್ಯಯಿಸಲಾಗಿದ್ದು ಇವುಗಳ ಅನುಮೋದನೆ.

**13 :– 6 ವರ್ಷ ಮೇಲ್ಪಟ್ಟ ಅನುತ್ಪಾಕದ ವಾಹನ ಖರೀದಿ ಸಾಲಗಳನ್ನು ಆಸ್ತಿ ಜವಾಬ್ದಾರಿ ತಖ್ತೆಯಿಂದ ಹೊರಗಿಡುವ ಕುರಿತು.**

**ಟಿಪ್ಪಣಿ :–** ಒಟ್ಟು 59 ಸಾಲಗಳ ರೂ. 24,69,929/– ಮೊತ್ತದ ವಸೂಲಾತಿ ಪ್ರಕ್ರಿಯೆಗಳು ಮುಂದುವರೆದಿದ್ದು ದಾವಾ ದಾಖಲಿಸಲಾಗಿದೆ. ವಸೂಲಾತಿ ವಿಳಂಬವಾಗುತ್ತಿರುವುದರಿಂದ ಸದ್ರಿ ಸಾಲಗಳನ್ನು ಆಸ್ತಿ ಜವಾಬ್ದಾರಿ ಪಟ್ಟಿಯಿಂದ ಹೊರಗಿಟ್ಟು ಅನುತ್ಪಾದಕ ಸಾಲಗಳ ಮೊತ್ತವನ್ನು ಕಡಿಮೆಗೊಳಿಸುವ ಕುರಿತು ನಿರ್ಣಯ ಕೈಗೊಳ್ಳುವುದು. ಮುಂದಿನ ದಿನಗಳಲ್ಲಿ ಸದ್ರಿ ಸಾಲಗಳು ವಸೂಲಾದಂತೆ ಮೊತ್ತವನ್ನು ಸಂಘದ ಆದಾಯಕ್ಕೆ ಸೇರಿಸಲಾಗುವುದು. ಸಾಲವನ್ನು ಮನ್ನಾ ಮಾಡಲಾಗುವುದಿಲ್ಲ.

**14 :– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳ ಪರಿಶೀಲನೆ ಮತ್ತು ನಿರ್ಣಯ.**

**ಟಿಪ್ಪಣಿ :–** ಸಾಮಾನ್ಯ ಸಭೆಯ ಕಾರ್ಯವ್ಯಾಪ್ತಿಯೊಳಗೆ ಬರಬಹುದಾದ ಇತರ ವಿಷಯಗಳ ಕುರಿತು ಪರಿಶೀಲನೆ ಮತ್ತು ನಿರ್ಣಯ.

## ಸದಸ್ಯರ ಗಮನಕ್ಕೆ

1. ಸಾಮಾನ್ಯ ಸಭೆಯಲ್ಲಿ ಚರ್ಚಿತವಾಗುವ ವಿಷಯದ ಕುರಿತು ನೀಡಲಾದ ಟಿಪ್ಪಣಿಗಳ ಬಗ್ಗೆ, ವಾರ್ಷಿಕ ವರದಿ, ಮುಂಗಡ ಪತ್ರ, ಲೆಕ್ಕ ಪರಿಶೋಧನಾ ವರದಿ, ಕಾರ್ಯಯೋಜನೆ ಇತ್ಯಾದಿ ಸಭೆಯಲ್ಲಿ ಚರ್ಚಿಸಬಹುದಾದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ, ಸಂದೇಹ, ಅಸಮಾಧಾನ, ಅಥವಾ ಸಲಹೆಗಳಿದ್ದರೆ ದಿನಾಂಕ 09-09-2024 ರ ಸೋಮವಾರ ಅಪರಾಹ್ನ 4 ಗಂಟೆಯೊಳಗೆ ಸಂಘದ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತವಾಗಿ ಪ್ರಶ್ನೆ ಕಳುಹಿಸಬಹುದು. [2023-24ನೇ ಸಹಕಾರ ವರ್ಷಕ್ಕೆ ಸಂಬಂಧಿಸಿದ ವಿಷಯಗಳು ಮಾತ್ರ]

2. ಸಭೆ ನಡೆಯುವಾಗ ದಯವಿಟ್ಟು ಕಾರ್ಯಸೂಚಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಕೇಳಿ. ಇತರ ವಿಷಯಗಳ ಬಗ್ಗೆ ಸಭೆಯ ಕೊನೆಯಲ್ಲಿ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು.

3. 2020-21ನೇ ಸಾಲಿನ ಪಾಲು ಮುನಾಫೆಯನ್ನು ಇದುವರೆಗೆ ಪಡೆಯದಿರುವ ಸದಸ್ಯರು ದಿನಾಂಕ 30-09-2024 ರೊಳಗೆ ಪಡೆದುಕೊಳ್ಳಬೇಕಾಗಿ ವಿನಂತಿ. ಪಡೆಯದಿದ್ದಲ್ಲಿ ಆ ಮೊತ್ತವನ್ನು ದಿನಾಂಕ 01-10-2024 ರಂದು ಯಾ ಸಂಘಕ್ಕೆ ಸೂಕ್ತವೆನಿಸಿದ ಮುಂದಿನ ದಿನಗಳಲ್ಲಿ ಸಂಘದ ಕ್ಷೇಮ ನಿಧಿಗೆ ಜಮಾ ಮಾಡಲಾಗುವುದು. ಒಮ್ಮೆ ಕ್ಷೇಮ ನಿಧಿಗೆ ಜಮಾ ಮಾಡಲಾದ ಪಾಲು ಮುನಾಫೆಯನ್ನು ಮತ್ತೆ ಸದಸ್ಯರಿಗೆ ಪಾವತಿಸಲು ಸಾಧ್ಯವಾಗುವುದಿಲ್ಲ ಹಾಗೂ ಈ ಬಗ್ಗೆ ಪ್ರತ್ಯೇಕ ಸೂಚನಾ ಪತ್ರವನ್ನು ಯಾ ಮಾಹಿತಿಯನ್ನು ನೀಡಲಾಗುವುದಿಲ್ಲ.

4. ಕಳೆದ 5 ವರ್ಷಗಳಿಂದೀಚೆಗೆ ಸದಸ್ಯರಾದ ಬಹುತೇಕ ಸದಸ್ಯರ ಪಾಲು ಪ್ರಮಾಣ ಪತ್ರ (ಷೇರ್ ಸರ್ಟಿಫಿಕೇಟ್) ಸಂಘದ ಪ್ರಧಾನ ಕಚೇರಿಯಲ್ಲಿದ್ದು ಸದಸ್ಯರು ಪಡೆದುಕೊಳ್ಳಬೇಕಾಗಿ ವಿನಂತಿ. ನೋಂದಾಯಿತ ಅಂಚೆ ಮೂಲಕ ಕಳುಹಿಸಲು ಅಂಚೆ ವೆಚ್ಚ ದುಬಾರಿಯಾಗುವುದರಿಂದ ತಾವೇ ಪ್ರಧಾನ ಕಚೇರಿಗೆ ಅಥವಾ ಶಾಖೆಗೆ ಭೇಟಿ ನೀಡಿ ಪಡೆದುಕೊಳ್ಳಬೇಕಾಗಿ ವಿನಂತಿ.

5. ಸದಸ್ಯರ ಎಲ್ಲಾ ವ್ಯವಹಾರಗಳಿಗೆ ಉಚಿತ ಎಸ್.ಎಮ್.ಎಸ್. ಸೌಲಭ್ಯವಿದ್ದು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ನೀಡಿ ಸಹಕರಿಸಬೇಕು. ಈಗಾಗಲೇ ನೀಡಲಾದ ನಿಮ್ಮ ಮೊಬೈಲ್ ಸಂಖ್ಯೆಯಲ್ಲಿ ಬದಲಾವಣೆಯಿದ್ದಲ್ಲಿ ನೂತನ ಸಂಖ್ಯೆಯನ್ನು ಸಂಘಕ್ಕೆ ನೀಡಬೇಕಾಗಿ ವಿನಂತಿ.

## 10-09-2023 ನೇ ಆದಿತ್ಯವಾರ ನಡೆದ ಸಂಘದ 103 ನೇ ಸಾಮಾನ್ಯ ಸಭೆಯ ನಡಾವಳಿಗಳು

ಸಂಘದ 103 ನೇ ಸಾಮಾನ್ಯ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎಚ್. ಗಣೇಶ್ ಕಾಮತ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 10 ಸೆಪ್ಟಂಬರ್ 2023 ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11.05 ಕ್ಕೆ ಸರಿಯಾಗಿ ಗಂಗೊಳ್ಳಿಯ ಶ್ರೀ ವಿಠಲ ರಖುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಜರಗಿತು. ಸಭೆಯಲ್ಲಿ ಒಟ್ಟು 562 ಸದಸ್ಯರು ಭಾಗವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಜಿ. ವಿಶ್ವನಾಥ ಆಚಾರ್ಯ ಆಗಮಿಸಿದ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕ ಶ್ರೀ ಗಣೇಶ ನಾಯಕ್ ಕಾರ್ಯಕ್ರಮ ನಿರೂಪಿಸಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭೆ ಆರಂಭವಾಯಿತು.

**ಸಭೆಯಲ್ಲಿ ಈ ಕೆಳಗಿನ ಸರ್ವಾನುಮತದ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ 1 :- 103 ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.**

**ನಿರ್ಣಯ :-**103 ನೇ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಸಾಮಾನ್ಯ ಸಭೆಯ 32 ಪುಟಗಳುಳ್ಳ ಒಟ್ಟು 3449 ನೋಟೀಸನ್ನು ಎಲ್ಲಾ "ಅ" ವರ್ಗದ ಸದಸ್ಯರಿಗೆ ದಿನಾಂಕ 25/08/2023 ರಂದು ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದ್ದು, ತಾ 23/08/2023 ರ ವಿಜಯವಾಣಿ ದಿನ ಪತ್ರಿಕೆಯ ಮಂಗಳೂರು ಆವೃತ್ತಿಯ ಪುಟ ಸಂಖ್ಯೆ 5 ಬಿ ಯಲ್ಲಿ ಸಾಮಾನ್ಯ ಸಭೆಯ ಬಗ್ಗೆ ಪ್ರಕಟಣೆ ನೀಡಲಾಗಿದ್ದು, ಸಂಘದ ವೆಬ್ ಸೈಟ್‌ನಲ್ಲಿಯೂ ಸಾಮಾನ್ಯ ಸಭೆಯ ಬಗ್ಗೆ ಸೂಚನೆ ನೀಡಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕರ ವಿವರಣೆಯನ್ನು ಒಪ್ಪಿದ ಸಭೆಯು ದಿನಾಂಕ 25/08/2023 ರಂದು ಕುಂದಾಪುರದ ಪ್ರಧಾನ ಅಂಚೆ ಕಚೇರಿಯಿಂದ ಸಾಮಾನ್ಯ ಅಂಚೆ ಮೂಲಕ ರಶೀದಿ ಸಂಖ್ಯೆ 169295813640 ರಂತೆ "ಅ" ವರ್ಗದ ಸದಸ್ಯರು ಹಾಗೂ ವಿವಿಧ ಕಚೇರಿಗಳಿಗೆ ಕಳುಹಿಸಲಾದ ಸಹಕಾರಿಯ 103 ನೇ ಸಾಲಿನ 32 ಪುಟಗಳುಳ್ಳ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಅಂಗೀಕರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 2 :- 11-09-2022 ರಂದು ನಡೆದ 102 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವುದು.**

**ನಿರ್ಣಯ :-** 11-09-2022 ರಂದು ನಡೆದ 102 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಸಾಮಾನ್ಯ ಸಭೆಯ ಪುಸ್ತಕದಲ್ಲಿ ನೀಡಲಾಗಿದ್ದು ಸದಸ್ಯರು ಬಯಸಿದಲ್ಲಿ ಓದುವುದಾಗಿ ಕಾರ್ಯನಿರ್ವಾಹಕರು ಸಭೆಗೆ ತಿಳಿಸಿದರು. ಈಗಾಗಲೆ ಪುಸ್ತಕದಲ್ಲಿ ನಡಾವಳಿಗಳನ್ನು ಮುದ್ರಿಸಿ ನೀಡಿರುವುದರಿಂದ ಪುನಃ ಓದುವ ಅವಶ್ಯಕತೆ ಇಲ್ಲವೆಂದು ಸಭೆಯು ಮುಖ್ಯ ಕಾರ್ಯನಿರ್ವಾಹಕರಿಗೆ ತಿಳಿಸಿತು. ನಂತರ ಸಭೆಯು ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 27 ರಿಂದ 31 ರ ವರೆಗಿನ ಒಟ್ಟು 5 ಪುಟಗಳ, ದಿನಾಂಕ 11-09-2022 ರಂದು ನಡೆದ ಸಂಘದ 102 ನೇ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸಲು ಸರ್ವಾನುಮತದಿಂದ ಅನುಮತಿ ನೀಡಿತು.

**ವಿಷಯ 3 :- 2022-2023 ನೇ ಸಾಲಿನ ಆಡಳಿತ ಮಂಡಳಿ ವರದಿಯ ಅನುಮೋದನೆ.**

**ನಿರ್ಣಯ :-** :- ಸಂಘದ 2022-2023 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಮುಖ್ಯ

ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ವರದಿಯ ಬಗ್ಗೆ ಚರ್ಚೆ ನಡೆದ ಬಳಿಕ ಈ ಬಾರಿಯ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 6 ರಿಂದ 11ರ ವರೆಗೆ ಸವಿವರವಾಗಿ ನೀಡಲಾದ 2022–23 ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 4 :– 2022–23ನೇ ಸಾಲಿನ ಲೆಕ್ಕ ಪರಿಶೋಧನಾ ಹಾಗೂ ಅನುಪಾಲನಾ ವರದಿಯ ಅನುಮೋದನೆ.**

**ನಿರ್ಣಯ :–** ಸಂಘದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಎನ್. ಶಾಂತಾರಾಮ ನಾಯಕ್, ಲೆಕ್ಕ ಪರಿಶೋಧಕರು, ಕುಂದಾಪುರ ಇವರು ನೀಡಿದ 2022–2023 ನೇ ಸಾಲಿನ 117 ಪುಟಗಳ ಲೆಕ್ಕ ಪರಿಶೋಧನಾ ವರದಿ ಹಾಗೂ ಆಡಳಿತ ಮಂಡಳಿಯು ತಯಾರಿಸಿದ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 22 ಮತ್ತು 23 ರಲ್ಲಿ ಸವಿವರವಾಗಿ ನೀಡಲಾದ ಅನುಪಾಲನಾ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ವರದಿಯ ಬಗ್ಗೆ ಸಮಗ್ರ ಚರ್ಚೆ ನಡೆದ ಬಳಿಕ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ 5 :– 2022–23ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ.**

**ನಿರ್ಣಯ:–** ಆಡಳಿತ ಮಂಡಳಿಯು ಶಿಫಾರಸು ಮಾಡಿರುವ ನಿವ್ವಳ ಲಾಭದ ವಿಂಗಡಣೆಯನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 10(21) ಹಾಗೂ ಸಂಘದ ಇತ್ತೀಚಿನ ವರೆಗೆ ತಿದ್ದುಪಡಿ ಮಾಡಲಾದ ಉಪವಿಧಿಗಳ ಪ್ರಕಾರ ದಿನಾಂಕ 14–08–2023 ರಂದು ನಡೆದ ಆಡಳಿತ ಮಂಡಳಿ ಸಭೆಯು ನಿರ್ಣಯ ಸಂಖ್ಯೆ 73/23–24 ರಂತೆ ಮಾಡಿದ ಶಿಫಾರಸನ್ನು ಅಂಗೀಕರಿಸಿದ ಸಭೆಯು ನಿವ್ವಳ ಲಾಭ **ರೂ. 1,02,11,404.60** ನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

| ಕ್ರ. ಸಂ | ಲಾಭ ವಿಂಗಡಣೆಯ ವಿವರ | ಎಷ್ಟು | ಮೊತ್ತ ರೂ. |
|---|---|---|---|
| 1. | ಮೀಸಲು ನಿಧಿ | 25% | 25,52,851.00 |
| 2. | ಸಂಯುಕ್ತ ಸಹಕಾರಿ ಶಿಕ್ಷಣ ನಿಧಿ | 2% | 2,04,228.00 |
| 3. | ಸಹಕಾರಿ ಅಕಾಡೆಮಿ ಮೈಸೂರು ನಿಧಿಗೆ | 0.5% | 51,057.00 |
| 4. | ಕಾರ್ಯಾಚರಣೆ ಮೀಸಲು ನಿಧಿಗೆ | 10% | 10,21,141.00 |
| 5. | ಸಾಮಾನ್ಯ ಕ್ಷೇಮ ನಿಧಿಗೆ | 5% | 5,10,570.00 |
| 6. | ಸಿಬ್ಬಂದಿ ಬೋನಸ್ಸು | 2 ತಿಂಗಳ ವೇತನ | 8,20,274.00 |
| 7. | 'ಅ' ವರ್ಗದ ಸದಸ್ಯರ ಲಾಭಾಂಶ | 17% | 37,85,618.00 |
| | 'ಬ' ವರ್ಗದ ಸದಸ್ಯರ ಲಾಭಾಂಶ | 17% | 1,21,279.00 |
| 8. | ಪಾಲು ಮುನಾಫೆ ಸಮೀಕರಣ ನಿಧಿ | 2% | 2,04,228.00 |
| 9. | ಸಾರ್ವಜನಿಕ ಉಪಕಾರ ನಿಧಿ | 2% | 2,04,228.00 |

| | | | |
|---|---|---|---|
| 10. | ಕಟ್ಟಡ ನಿಧಿಗೆ | 3% | 3,06,342.00 |
| 11. | ಸಿಬ್ಬಂದಿ/ಸದಸ್ಯರ ಕ್ಷೇಮ ನಿಧಿ | 2% | 2,04,228.00 |
| 12. | ಸದಸ್ಯರ ಶಿಕ್ಷಣ ನಿಧಿ | 2% | 2,04,228.00 |
| 13. | ಉಳಿದ ಮೊಬಲಗು ಮೀಸಲು ನಿಧಿಗೆ | | 21,132.60 |
| | | **ಒಟ್ಟು ಮೊತ್ತ ರೂ.** | **1,02,11,404.60** |

**ವಿಷಯ 6 :– 2022–23 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚಿನ ಪರಿಶೀಲನೆ ಮತ್ತು ಮಂಜೂರಾತಿ.**

**ನಿರ್ಣಯ :–** 2022–23 ನೇ ಸಾಲಿನಲ್ಲಿ ಅಂದಾಜು ಮೀರಿದ ಖರ್ಚುಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರ ನೀಡಿ ಅಂದಾಜು ಮೀರಲು ಕಾರಣವನ್ನು ವಿವರಿಸಿದರು. ಮುಖ್ಯ ಕಾರ್ಯನಿರ್ವಾಹಕರ ವಿವರಣೆಯನ್ನು ಒಪ್ಪಿದ ಸಭೆಯು ಅಂದಾಜು ಮೀರಿದ 3 ಖರ್ಚುಗಳಾದ ಸವಕಳಿ **ರೂ. 64,452/–,** ಮಹಾಸಭೆ ಮತ್ತು ಸ್ಥಾಪಕರ ದಿನಾಚರಣೆ **ರೂ. 39,663/–,** ಹಾಗೂ ಗಣಕ ಯಂತ್ರ ನಿರ್ವಹಣೆ **ರೂ. 9,477/–** ಸೇರಿದಂತೆ ಒಟ್ಟು **ರೂ. 1,13,592/–** (ರೂಪಾಯಿ ಒಂದು ಲಕ್ಷದ ಹದಿಮೂರು ಸಾವಿರದ ಐದು ನೂರಾ ತೊಂಭತ್ತೆರಡು ಮಾತ್ರ) ಕ್ಕೆ ಸರ್ವಾನುಮತದಿಂದ ಮಂಜೂರಾತಿ ನೀಡಿತು

**ವಿಷಯ7 : –2023–24ನೇ ಸಾಲಿನ ಮುಂಗಡ ಪತ್ರದ ಅನುಮೋದನೆ.**

**ನಿರ್ಣಯ :–** :–ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯಲ್ಲಿ ವಿವರವಾಗಿ ನೀಡಲಾದ 2023–24 ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆದ ತರುವಾಯ ಸಾಮಾನ್ಯ ಸಭೆಯ ನೋಟೀಸಿನ ಪುಟ ಸಂಖ್ಯೆ 13 ಹಾಗೂ 14 ರಲ್ಲಿ ಸವಿವರವಾಗಿ ನೀಡಲಾದ **ರೂ. 9,88,50,000/–** ಒಟ್ಟು ಮೊತ್ತವನ್ನು ಹೊಂದಿರುವ **ರೂ. 1,60,00,000/–** ನಿವ್ವಳ ಲಾಭವನ್ನು ನೀಡುವಂತಹ 2023–24 ನೇ ಸಾಲಿನ ಮುಂಗಡ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 8 :–2022–23 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರ ಅನುಮೋದನೆ.**

**ನಿರ್ಣಯ :–** 2022–23 ನೇ ಸಾಲಿನಲ್ಲಿ ಸೇರ್ಪಡೆಯಾದ ಹಾಗೂ ಸದಸ್ಯತ್ವ ತ್ಯಜಿಸಿದವರ ವಿವರಗಳನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ಮಂಡಿಸಿದರು. ವಿವರಗಳನ್ನು ಪರಿಶೀಲಿಸಿದ ಸಭೆಯು ವರದಿ ವರ್ಷದಲ್ಲಿ ನೂತನವಾಗಿ ಸೇರ್ಪಡೆಯಾದ "ಅ" ವರ್ಗದ 223, "ಬಿ" ವರ್ಗದ 2 ಸದಸ್ಯರ, "ಸಿ" ವರ್ಗದ 185 ಸದಸ್ಯರ ಹಾಗೂ ಸದಸ್ಯತ್ವ ತ್ಯಜಿಸಿದ 31 "ಅ" ವರ್ಗದ, 9 "ಬಿ" ವರ್ಗದ ಸದಸ್ಯರ ವಿವರಗಳಿಗೆ ಸರ್ವಾನುಮತದಿಂದ ಅನುಮೋದನೆ ನೀಡಿತು

**ವಿಷಯ 9 :– 2023–24 ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಲೆಕ್ಕ ಪರಿಶೋಧನಾ ಶುಲ್ಕ ನಿಗದಿ.**

**ನಿರ್ಣಯ :–** 2019–20 ನೇ ಸಾಲಿನಲ್ಲಿ ಸಂಘದ ಆಂತರಿಕ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸಿ

ಸಂಘಕ್ಕೆ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಕೋಟೇಶ್ವರದ ಹಿರಿಯ ಲೆಕ್ಕ ಪರಿಶೋಧಕರಾದ ಶ್ರೀ ಎ. ಸುದರ್ಶನ್ ಪೈಯವರನ್ನು ಲೆಕ್ಕ ಪರಿಶೋಧಕರನ್ನಾಗಿ ಆಯ್ಕೆ ಮಾಡುವಂತೆ ದಿನಾಂಕ 27–06–2023 ರಂದು ನಡೆದ ಆಡಳಿತ ಮಂಡಳಿಯು ನಿರ್ಣಯ ಸಂಖ್ಯೆ 34/2023–24 ರಂತೆ ಶಿಫಾರಸು ಮಾಡಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯ ಗಮನಕ್ಕೆ ತಂದರು.

ಮುಖ್ಯ ಕಾರ್ಯನಿರ್ವಾಹಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ –1187 ಹಾಗೂ ನೋಂದಣಿ ಸಂಖ್ಯೆ C–26/02/2013–19:42:17 ಹೊಂದಿರುವ ಶ್ರೀ ಎ. ಸುದರ್ಶನ್ ಪೈ, ಲೆಕ್ಕಪರಿಶೋಧಕರು, ಮುಖ್ಯ ರಸ್ತೆ, ಕೋಟೇಶ್ವರ ಇವರನ್ನು 2023–24ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಲೆಕ್ಕಪರಿಶೋಧನಾ ಶುಲ್ಕವನ್ನು ವರದಿ ವರ್ಷಾಂತ್ಯದ ದುಡಿಯುವ ಬಂಡವಾಳವನ್ನು ಆಧರಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಪಾವತಿ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 10: –2024–25 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಲೆಕ್ಕಪರಿಶೋಧನಾ ಶುಲ್ಕ ನಿಗದಿ.**

**ನಿರ್ಣಯ :–** 2024–2025 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು ಆಯ್ಕೆ ಮಾಡುವಂತೆ ದಿನಾಂಕ 14–08–2023 ರಂದು ನಡೆದ ಆಡಳಿತ ಮಂಡಳಿಯು ನಿರ್ಣಯ ಸಂಖ್ಯೆ 34/2023–24 ರಂತೆ ಶಿಫಾರಸು ಮಾಡಿರುವ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯ ಗಮನಕ್ಕೆ ತಂದರು.

ಮುಖ್ಯ ಕಾರ್ಯನಿರ್ವಾಹಕರು ನೀಡಿದ ವಿವರಣೆಗೆ ಒಪ್ಪಿದ ಸಭೆಯು ಲೆಕ್ಕ ಪರಿಶೋಧನಾ ಇಲಾಖಾ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಕ್ರಮ ಸಂಖ್ಯೆ –1160 ಹಾಗೂ ನೋಂದಣಿ ಸಂಖ್ಯೆ F–05/07/2023–11:34:367 ಹೊಂದಿರುವ ಮೆಸರ್ಸ್ ಜಯಲಕ್ಷ್ಮೀ ಕಾಮತ್ & ಕೋ, ಲೆಕ್ಕ ಪರಿಶೋಧಕರು, ಅಂಬಲ್ಪಾಡಿ, ಉಡುಪಿ ಇವರನ್ನು 2024–25 ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಲು ಸರ್ವಾನುಮತದಿಂದ ನಿರ್ಣಯಿಸಿತು. ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕವಾಗಿ ವಾರ್ಷಿಕ ರೂ 1,50,000/–+ ಜಿ.ಎಸ್.ಟಿ. (ರೂ ಒಂದು ಲಕ್ಷದ ಐವತ್ತು ಸಾವಿರ ಮತ್ತು ಜಿ.ಎಸ್.ಟಿ.) ನಿಗದಿ ಪಡಿಸಿ ಸರ್ವಾನುಮತದ ನಿರ್ಣಯ ಕೈಗೊಂಡಿತು

**ವಿಷಯ 11 :– 2023–24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ.**

**ನಿರ್ಣಯ :–** ಆಡಳಿತ ಮಂಡಳಿಯು ಶಿಪಾರಸು ಮಾಡಿದ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 11 ರಲ್ಲಿ ವಿವರವಾಗಿ ನೀಡಲಾದ 2023–24 ನೇ ಸಾಲಿನ ಕ್ರಿಯಾ ಯೋಜನೆಗಳ ಕುರಿತು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕೊನೆಗೆ, ಆಡಳಿತ

ಮಂಡಳಿಯು ಶಿಫಾರಸು ಮಾಡಿದ 2023–24 ನೇ ಸಾಲಿನ ಕ್ರಿಯಾಯೋಜನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 12 : ಮೀಸಲು ಹಾಗು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.**

**ನಿರ್ಣಯ:** 2022–23 ನೇ ಸಾಲಿನಲ್ಲಿ ಶಿಕ್ಷಣ ನಿಧಿಯ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸಿದ ಮೊತ್ತ ರೂ 2,17,239/– ಹಾಗೂ ಸಾರ್ವಜನಿಕ ಉಪಕಾರ ನಿಧಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ನೀಡಲಾದ ಮೊತ್ತ ರೂ 2,12,777/– ರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರ ನೀಡಿದರು. ಮುಖ್ಯ ಕಾರ್ಯನಿರ್ವಾಹಕರು ನೀಡಿದ ವಿವರಗಳನ್ನು ಪರಿಶೀಲಿಸಿದ ಸಭೆಯು ಎರಡೂ ನಿಧಿಗಳ ವಾಸ್ತವಿಕ ಬಳಕೆಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ 13 : ಸಾಲಗಳ ನಿಯಮಾವಳಿಗಳಲ್ಲಿ ಅಗತ್ಯ ಸೇರ್ಪಡೆ.**

**ನಿರ್ಣಯ :** ಸಾಮಾನ್ಯ ಸಭೆಯ ಸೂಚನಾ ಪತ್ರದ ಪುಟ ಸಂಖ್ಯೆ 3 ರ ಕ್ರಮ ಸಂಖ್ಯೆ 13 ರಲ್ಲಿ ವಿವರಿಸಲಾಗಿರುವ ವಾಹನ ಅಡಮಾನ ನಗದುದ್ದರಿ ಸಾಲ (S.L.3) ನ್ನು ನೂತನವಾಗಿ ಸೇರ್ಪಡೆಗೊಳಿಸುವುದು ಹಾಗೂ ಚಿನ್ನಾಭರಣ ಸಾಲ ಗ್ರಾಂ. ಒಂದರ ನೀಡಲಾಗುವ ಗರಿಷ್ಟ ಸಾಲದ ಮಿತಿಯನ್ನು ನಿರ್ಧರಿಸುವ ಅಧಿಕಾರವನ್ನು ಆಡಳಿತ ಮಂಡಳಿಗೆ ನೀಡುವ ಅವಶ್ಯಕತೆಯನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಗೆ ವಿವರಿಸಿದರು. ಮುಖ್ಯಕಾರ್ಯನಿರ್ವಾಹಕರ ವಿವರಣೆಯನ್ನು ಒಪ್ಪಿದ ಸಭೆಯು ಎರಡೂ ವಿವರಗಳನ್ನು ಸಾಲಗಳ ನಿಯಮಾವಳಿಗಳಲ್ಲಿ ಸೇರ್ಪಡೆಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಿತು.

ಸಭೆಯಲ್ಲಿ ಆಡಳಿತ ಮಂಡಳಿಯ ಎಲ್ಲಾ 16 ಸದಸ್ಯರು ಉಪಸ್ಥಿತರಿದ್ದರು.

**ಗಂಗೊಳ್ಳಿ**
**10/09/2023**

**ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕ**

## 2023–24ನೇ ಸಾಲಿನ ಆಡಳಿತ ಮಂಡಳಿ ವರದಿ

ಸನ್ಮಾನ್ಯ ಸದಸ್ಯ ಬಂಧುಗಳೇ,

ಮಾರ್ಚ್ 31, 2024 ಕ್ಕೆ ಅಂತ್ಯಗೊಂಡ ವರದಿ ವರ್ಷದ ಅಂಕಿ–ಅಂಶಗಳು ಹಾಗೂ ಆಡಳಿತ ಮಂಡಳಿ ವರದಿಯನ್ನು ತಮ್ಮ ಮುಂದಿಡಲು ಸಂತೋಷವಾಗುತ್ತಿದೆ.

**1. ಸದಸ್ಯತ್ವ ಮತ್ತು ಪಾಲು ಬಂಡವಾಳ :**

ವರದಿ ವರ್ಷದಲ್ಲಿ "ಅ" ವರ್ಗಕ್ಕೆ **279** ಸದಸ್ಯರು, "ಬಿ" ವರ್ಗಕ್ಕೆ **3** ಸದಸ್ಯರು ಸೇರ್ಪಡೆಯಾಗಿದ್ದು, "ಅ" ವರ್ಗದ **37** ಸದಸ್ಯತ್ವ, "ಬಿ" ವರ್ಗದ **31** ಸದಸ್ಯತ್ವವು ಚುಕ್ತಾಗೊಂಡು ವರ್ಷಾಂತ್ಯಕ್ಕೆ **3590** "ಅ" ವರ್ಗದ ಸದಸ್ಯರು ಹಾಗೂ 603 "ಬಿ" ವರ್ಗದ ಸದಸ್ಯರನ್ನು ಸಂಘವು ಹೊಂದಿರುತ್ತದೆ. ವರ್ಷಾಂತ್ಯಕ್ಕೆ **ರೂ. 2,20,47,000/–** "ಅ" ವರ್ಗದ, **ರೂ. 6,92,900/–** "ಬಿ" ವರ್ಗದ ಹಾಗೂ **ರೂ. 36,700/–** "ಸಿ" ವರ್ಗದ ಪಾಲು ಬಂಡವಾಳದೊಂದಿಗೆ ಒಟ್ಟು **ರೂ. 2,27,76,600/–** ಪಾಲು ಬಂಡವಾಳವನ್ನು ಸಂಘವು ಹೊಂದಿದೆ.

**2. ದುಡಿಯುವ ಬಂಡವಾಳ :**

31–03–2024 ರಂದು ಅಂತ್ಯಗೊಂಡ ಸಹಕಾರಿ ವರ್ಷದಲ್ಲಿ ಸಂಸ್ಥೆಯು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು ದುಡಿಯುವ ಬಂಡವಾಳವು **ರೂ. 87.77** ಕೋಟಿ ದಾಖಲಾಗಿದೆ. ಕಳೆದ ಸಾಲಿನಲ್ಲಿ ಇದು **ರೂ. 69.84** ಕೋಟಿ ಆಗಿತ್ತು.

**3. ವಿನಿಯೋಗಗಳು :**

ಸಂಘದ ಶಾಸನಬದ್ಧ ನಿಧಿಗಳನ್ನು ಹಾಗೂ ಹೆಚ್ಚುವರಿ ಠೇವಣಿಗಳನ್ನು ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 18(ಬಿ) ಯನ್ವಯ ಭಾರತೀಯ ರಿಸರ್ವ ಬ್ಯಾಂಕಿನಲ್ಲಿ ನೋಂದಾಯಿಸಲ್ಪಟ್ಟ ಸಹಕಾರಿ ಬ್ಯಾಂಕ್‌ಗಳಲ್ಲಿ ಮಾತ್ರ ವಿನಿಯೋಗಿಸಲಾಗಿದೆ. ವರ್ಷಾಂತ್ಯಕ್ಕೆ ಅವುಗಳ ಮೊತ್ತ **ರೂ. 27,01,70,055/–** ಆಗಿದ್ದು ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಸಂಸ್ಥೆಯ ವಿವರ | ಹೂಡಿಕೆ ಮೊತ್ತ ರೂ. |
|---|---|---|
| 1 | ಭಟ್ಕಳ ಅರ್ಬನ್ ಸಹಕಾರಿ ಬ್ಯಾಂಕ್ ನಿಯಮಿತ | 3,00,00,000 |
| 2 | ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ | 4,97,00,000 |
| 3 | ಮಹಾಲಕ್ಷ್ಮೀ ಸಹಕಾರಿ ಬ್ಯಾಂಕ್ ನಿಯಮಿತ | 5,00,00,000 |
| 4 | ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ | 5,00,00,000 |
| 5 | ಸಿರ್ಸಿ ಅರ್ಬನ್ ಕೋ–ಆಪ್ ಬ್ಯಾಂಕ್ ನಿಯಮಿತ | 5,00,00,000 |
| 6 | ಎಸ್.ವಿ.ಸಿ. ಕೊ–ಆಪರೇಟಿವ್ ಬ್ಯಾಂಕ್ ನಿಯಮಿತ | 3,01,70,055 |
| 7 | ಕರ್ಣಾಟಕ ಬ್ಯಾಂಕ್ ನಿಯಮಿತ | 1,00,00,000 |
| 8 | ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕ್ಷೇಮ ನಿಧಿ | 3,00,000 |
| | **ಒಟ್ಟು** | **₹ 27,01,70,055** |

**4. ಸದಸ್ಯರ ಠೇವಣಾತಿಗಳು ಹಾಗೂ ಸಾಲಗಳು :**

ಸದಸ್ಯರ ಸಹಕಾರದಿಂದ ವರದಿ ವರ್ಷಾಂತ್ಯಕ್ಕೆ ಎಲ್ಲಾ ವಿಧದ ಠೇವಣಿಗಳ ಮೊತ್ತ **ರೂ.77.59** ಕೋಟಿಗಳಾಗಿದ್ದು ಸದಸ್ಯರ ಹೊರಬಾಕಿ ಸಾಲ **ರೂ. 62.26** ಕೋಟಿಗಳಾಗಿರುತ್ತವೆ. ಒಟ್ಟು ಹೊರಬಾಕಿ ಸಾಲದಲ್ಲಿ **ರೂ. 4,59,10,200/-** ಸುಸ್ತಿ ಸಾಲವಾಗಿದ್ದು, ಸುಸ್ತಿ ಸಾಲದ ಪ್ರತಿ ಶತ ಪ್ರಮಾಣ **7.37** ಆಗಿದೆ. ಕಳೆದ ಸಾಲಿನಲ್ಲಿ ಇದು **ಶೇ 8.55** ಆಗಿತ್ತು.

**5. ಲಾಭ, ತಲಾ ಶೇರಿನ ಆದಾಯ, ಶೇರಿನ ಪುಸ್ತಕ ಮೌಲ್ಯ ಮತ್ತು ಲಾಭ ವಿಂಗಡಣೆ :**

ಸದಸ್ಯರ ಸಹಕಾರ, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ಸಂಘಟಿತ ಕಾರ್ಯ ಯೋಜನೆಯ ಪರಿಣಾಮಕಾರಿ ಅನುಷ್ಠಾನದಿಂದಾಗಿ ವರದಿ ವರ್ಷಾಂತ್ಯಕ್ಕೆ ನಿವ್ವಳ ಲಾಭವು **ರೂ. 1,09,09,922.46** ದಾಖಲಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಲಾಭದಲ್ಲಿ **6.84%** ಹೆಚ್ಚುವರಿಯಾಗಿದೆ.

ವರದಿ ವರ್ಷಾಂತ್ಯಕ್ಕೆ **ರೂ. 1,000/-** ಮೌಲ್ಯದ ಷೇರೊಂದರ ತಲಾ ಆದಾಯವು **ರೂ. 494.84** ಹಾಗೂ ಪುಸ್ತಕ ಮೌಲ್ಯವು **ರೂ. 3,919/-** ಆಗಿರುತ್ತದೆ. ನಿವ್ವಳ ಲಾಭವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ಸಹಕಾರಿಯ ಉಪವಿಧಿಗಳ ಅನುಸಾರ ಈ ಕೆಳಗಿನಂತೆ ವಿಂಗಡಿಸಲು ದಿನಾಂಕ: 19-08-2024 ರಂದು ನಡೆದ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

| ಕ್ರ. ಸಂ | ಲಾಭ ವಿಂಗಡಣೆಯ ವಿವರ | ಎಷ್ಟು | ಮೊತ್ತ ರೂ. |
|---|---|---|---|
| 1. | ಮೀಸಲು ನಿಧಿ | 25% | 27,27,481.00 |
| 2. | ಸಹಕಾರಿ ಶಿಕ್ಷಣ ನಿಧಿ | 2% | 2,18,198.00 |
| 3. | ಸಹಕಾರಿ ಅಕಾಡೆಮಿ ಮೈಸೂರು ನಿಧಿಗೆ | 0.5% | 54,550.00 |
| 4. | ಕಾರ್ಯಾಚರಣೆ ಮೀಸಲು ನಿಧಿಗೆ | 10% | 10,90,992.00 |
| 5. | ಸಾಮಾನ್ಯ ಕ್ಷೇಮ ನಿಧಿಗೆ | 5% | 5,45,496.00 |
| 6. | ಸಿಬ್ಬಂದಿ ಬೋನಸ್ಸು | 2 ತಿಂಗಳ ವೇತನ | 9,41,419.00 |
| 7. | ಅ ವರ್ಗದ ಲಾಭಾಂಶ | 17% | 38,59,088.00 |
| | ಬ ವರ್ಗದ ಲಾಭಾಂಶ | 17% | 1,19,458.00 |
| 8. | ಪಾಲು ಮುನಾಫೆ ಸಮೀಕರಣ ನಿಧಿಗೆ | 2% | 2,18,198.00 |
| 9. | ಸಾರ್ವಜನಿಕ ಉಪಕಾರ ನಿಧಿಗೆ | 2% | 2,18,198.00 |
| 10. | ಕಟ್ಟಡ ನಿಧಿಗೆ | 4% | 4,36,397.00 |
| 11. | ಸಿಬ್ಬಂದಿ/ಸದಸ್ಯರ ಕ್ಷೇಮ ನಿಧಿ | 2% | 2,18,198.00 |
| 12. | ಸದಸ್ಯರ ಶಿಕ್ಷಣ ನಿಧಿ | 2% | 2,18,198.00 |
| 13. | ಉಳಿದ ಮೊಬಲಗು ಮೀಸಲು ನಿಧಿಗೆ | | 44,051.46 |
| | | ಒಟ್ಟು | ₹ **1,09,09,922.46** |

**6. ಈ ಸ್ಟಾಂಪಿಂಗ್ ಮತ್ತು ಪಹಣಿ ಪತ್ರಿಕೆ (ಆರ್.ಟಿ.ಸಿ. ಸೇವೆ) :**

ವರದಿ ಸಾಲಿನಲ್ಲಿ ಗಂಗೊಳ್ಳಿಯ ಪ್ರಧಾನ ಕಚೇರಿ, ಕೋಟೇಶ್ವರ ಹಾಗೂ ಉಪ್ಪುಂದ ಶಾಖೆಗಳು ಸೇರಿದಂತೆ **3** ಈ ಸ್ಟಾಂಪಿಂಗ್ ವಿತರಣಾ ಕೇಂದ್ರಗಳಲ್ಲಿ ಒಟ್ಟು **34,59,428 ರೂ.** ಮೌಲ್ಯದ **13728** ಠಸೆ ಕಾಗದಗಳನ್ನು, **826** ಆರ್.ಟಿ.ಸಿ. ಗಳನ್ನು ವಿತರಿಸಲಾಗಿದೆ.

| ಕ್ರ. ಸಂ. | ಶಾಖೆ | ಠಸೆ ಕಾಗದಗಳು | ಮೌಲ್ಯ ರೂ. | ಆರ್.ಟಿ.ಸಿ. |
|---|---|---|---|---|
| 1. | ಗಂಗೊಳ್ಳಿ | 3059 | 8,19,453 | 501 |
| 2. | ಕೋಟೇಶ್ವರ | 5497 | 13,48,226 | 193 |
| 3. | ಉಪ್ಪುಂದ | 5172 | 12,91,749 | 132 |
| | **ಒಟ್ಟು** | **13728** | **₹ 34,59,428** | **826** |

**7. ಶಾಖೆಗಳು ಮತ್ತು ಶಾಖೆಗಳಲ್ಲಿ ವ್ಯವಹಾರ :**

ಸಂಘದ ಕೋಟೇಶ್ವರ, ಉಪ್ಪುಂದ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ: 31-03-2024 ರಂದು ಇದ್ದಂತೆ ಪ್ರಧಾನ ಕಚೇರಿಯು ಸೇರಿದಂತೆ ಶಾಖಾವಾರು ಠೇವಣಾತಿ ಹಾಗೂ ಸಾಲಗಳ ವಿವರ ಈ ಕೆಳಗಿನಂತಿದೆ.

| ಶಾಖೆ | ಠೇವಣಾತಿಗಳು | ಹೊರಬಾಕಿ ಸಾಲ |
|---|---|---|
| ಗಂಗೊಳ್ಳಿ | 56,92,15,180 | 49,92,87,878 |
| ಕೋಟೇಶ್ವರ | 12,05,26,193 | 3,23,01,861 |
| ಉಪ್ಪುಂದ | 8,62,13,914 | 9,10,13,053 |
| **ಒಟ್ಟು** | **₹ 77,59,55,287** | **₹ 62,26,02,792** |

**8. ಆಡಳಿತ ಮಂಡಳಿ ಸಭೆ, ಅಧ್ಯಯನ ಪ್ರವಾಸ ಮತ್ತು ಸಾಮಾನ್ಯ ಸಭೆ :**

ವರದಿ ಸಾಲಿನಲ್ಲಿ 12 ಆಡಳಿತ ಮಂಡಳಿ ಸಭೆ ಜರಗಿದೆ. ಆಡಳಿತ ಮಂಡಳಿ ಸಭೆಯ ನಿರ್ಣಯ ಸಂಖ್ಯೆ 133/2021ರಂತೆ ವರದಿ ಸಾಲಿನಲ್ಲಿ ಒಟ್ಟು 12 ನಿರ್ದೇಶಕರಿಗೆ **ರೂ. 1,78,500/-** ಸಭಾ ಭತ್ಯೆ ಪಾವತಿಸಲಾಗಿದೆ.

ಅಧ್ಯಯನ ಪ್ರವಾಸದ ಅಂಗವಾಗಿ ದಿನಾಂಕ 06-02-2024 ನೇ ಮಂಗಳವಾರ ಸಂಘದ ನಿರ್ದೇಶಕ ಮಂಡಳಿಯ 12 ಸದಸ್ಯರು ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕ್ಯಾಂಪ್ಕೋ ಚೊಕಲೇಟ್ ಫ್ಯಾಕ್ಟರಿ ಹಾಗೂ ಮಂಗಳೂರಿನ ಒಡಿಯೂರು ಶ್ರೀ ವಿವಿಧೊದ್ದೇಶ ಸೌಹಾರ್ದ ಸಹಕಾರಿ ಸಂಘಕ್ಕೆ ಭೇಟಿ ನೀಡಿ ಉಪಯುಕ್ತ ಮಾಹಿತಿ ಪಡೆದರು.

ನಮ್ಮ ಸಂಘಕ್ಕೆ ತಂತ್ರಾಂಶ ಒದಗಿಸುತ್ತಿರುವ ಮಂಗಳೂರಿನ ಆಟೋಮೇಶನ್ ಇನ್ಫೋ ಸೊಲ್ಯುಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೂ ಭೇಟಿ ನೀಡಿದ ಆಡಳಿತ ಮಂಡಳಿ ಸದಸ್ಯರು ತಂತ್ರಾಂಶ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿದರು.

ದಿನಾಂಕ 17-04-2023 ರಂದು ಬೆಳಗಾವಿ ಜಿಲ್ಲೆಯ ನಾಗನೂರು ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನೊಳಗೊಂಡ 20 ಸದಸ್ಯರ ತಂಡ ನಮ್ಮ ಸಂಘದ ಪ್ರಧಾನ ಕಚೇರಿಗೆ ಭೇಟಿ ನೀಡಿತು. ಈ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಆಗಮಿಸಿದ ಸಂಘದ ಸದಸ್ಯರು ಸಹಕಾರಿ ಸಂಘವನ್ನು ಅಭಿವೃದ್ಧಿ ಪಡಿಸಲು ಹಾಗೂ ಕಾರ್ಯನಿರ್ವಹಣೆಗೆ ಅಗತ್ಯವೆನಿಸಿದ ಸಲಹೆ ಸೂಚನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

ವರದಿ ವರ್ಷದ ಸಾಮಾನ್ಯ ಸಭೆಯು 10 ಸಪ್ಟೆಂಬರ್ 2023ನೇ ಆದಿತ್ಯವಾರ ಪೂರ್ವಾಹ್ನ 11 ಗಂಟೆಗೆ ಸರಿಯಾಗಿ ಗಂಗೊಳ್ಳಿಯ ಶ್ರೀ ವಿಠಲ ರಕುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಜರಗಿತು. ಸಭೆಯಲ್ಲಿ ಒಟ್ಟು **562** ಸದಸ್ಯರು ಭಾಗವಹಿಸಿದ್ದರು.

**9. ಸಿಬ್ಬಂದಿ ಮತ್ತು ಸಿಬ್ಬಂದಿ ತರಬೇತಿ :**

ವರದಿ ಸಾಲಿನಲ್ಲಿ ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ ಒಟ್ಟು 14 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ವರದಿ ಸಾಲಿನಲ್ಲಿ ಸಿಬ್ಬಂದಿ ವೇತನದ ಬಗ್ಗೆ **ರೂ. 58,32,836/-** ವ್ಯಯಿಸಲಾಗಿದ್ದು, ಇದು ಸಹಕಾರಿಯ ದುಡಿಯುವ ಬಂಡವಾಳದ 0.66 ಆಗಿದ್ದು ಕಳೆದ ಸಾಲಿನಲ್ಲಿ ಇದು 0.67 ಆಗಿತ್ತು.

07-12-2023 ರಿಂದ 16-12-2023 ರವರೆಗೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ಒಡಿಯೂರು ಇಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಆಯೋಜಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದಲ್ಲಿ ನಮ್ಮ ಸಂಘದ ಕಿರಿಯ ಸಹಾಯಕಿಯರಾದ ಪ್ರತೀಕ್ಷಾ ಹಾಗೂ ಪಲ್ಲವಿ ಭಾಗವಹಿಸಿ ತರಬೇತಿ ಪಡೆದಿದ್ದು ಪ್ರತೀಕ್ಷಾರವರು ಶಿಬಿರಾರ್ಥಿಗಳಿಗಾಗಿ ನಡೆಸಲಾದ ಸ್ಪರ್ಧೆಯಲ್ಲಿ ಉತ್ತಮ ಪ್ರಾರ್ಥನೆಗೆ ಬಹುಮಾನ ಪಡೆದಿರುತ್ತಾರೆ.

02-12-2023ರಂದು ಹಂಗಾರಕಟ್ಟೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಆಶ್ರಯದಲ್ಲಿ ನಡೆದ "ಸೌಹಾರ್ದ ಸಂಭ್ರಮ-2023" ರಲ್ಲಿ ನಮ್ಮ ಸಂಘದ ಕೆ. ಶ್ರೀನಿವಾಸ ನಾಯಕ್‌ರವರು ಶೆಟಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಹಾಗೂ ಶ್ರೀ ಲೋಹಿತ್ ಭಟ್‌ರವರು ವಾಲಿಬಾಲ್‌ನಲ್ಲಿ ಪ್ರಥಮ ಬಹುಮಾನ ಪಡೆದಿರುತ್ತಾರೆ.

ದಿನಾಂಕ: 10-02-2024 ರಂದು ಸಂಘದ ಸಿಬ್ಬಂದಿಗಳಿಗಾಗಿ ಒಂದು ದಿನದ "ಸಿಬ್ಬಂದಿ ಸಭೆ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ" ಕಾರ್ಯಾಗಾರವನ್ನು ನಡೆಸಲಾಗಿತ್ತು. ಕಾರ್ಯಾಗಾರವನ್ನು ಸಹಕಾರಿಯ ಸದಸ್ಯರು ಹಾಗೂ ವಸ್ತ್ರೋದ್ಯಮಿ ಶ್ರೀ ಎಮ್. ಜಿ. ಪ್ರಕಾಶ್ ಪೈ ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಷ ಕೆ.ಎಮ್. ತರಬೇತುದಾರರು ಮಾಸ್ಟರ್‌ಮೈಂಡ್ ಎಂಟರ್ ಪ್ರೈಸಸ್ ಮಂಗಳೂರು ಇವರು ಆಗಮಿಸಿದ್ದು ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಿದರು.

13-03-2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ಉಡುಪಿಯಲ್ಲಿ ರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಡೆದ ಸ್ಪರ್ಧೆಯಲ್ಲಿ ನಮ್ಮ ಸಂಘದ ಪ್ರತೀಕ್ಷಾ ದ್ವಿತೀಯ ಬಹುಮಾನ ಪಡೆದಿರುತ್ತಾರೆ.

**10. ಸಂಸ್ಥಾಪಕರ ದಿನಾಚರಣೆ :**

ದಿನಾಂಕ 21-01-2024 ರಂದು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್‌ರ

ದಿನವನ್ನು ಗಂಗೊಳ್ಳಿಯ ಶ್ರೀ ವಿಠಲ ರಖುಮಾಯಿ ದೇವಸ್ಥಾನದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಆಚರಿಸಲಾಯಿತು. ಸಮಾರಂಭದಲ್ಲಿ ಸಂಘದ ಸದಸ್ಯರುಗಳಾದ ಶ್ರೀ ಮಡಿಕಲ್ ಸುರೇಶ್ ಖಾರ್ವಿ, ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ, ಶ್ರೀ ಮಹಾಂಕಾಳಿ ಅಮ್ಮನವರ ದೇವಸ್ಥಾನ, ಗಂಗೊಳ್ಳಿ, ಶ್ರೀ ಶ್ರೀಧರ ಗಣಪತಿ ಹೆಗ್ಡೆ, ನಿವೃತ್ತ ಸಹಾಯಕ ವ್ಯವಸ್ಥಾಪಕರು, ಕಾರ್ಪೊರೇಷನ್ ಬ್ಯಾಂಕ್, ಭಾರತೀಯ ವಾಯುಪಡೆಯ ಮಾಜಿ ಯೋಧರು ಹಾಗೂ ಶ್ರೀ ಶಿವಾನಂದ ಗಾಣಿಗ, ಮಾಲಕರು, ಎಸ್.ವಿ.ಎಮ್.ಎಸ್. ಉಪ್ಪುಂದ ಇವರನ್ನು ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು.

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಬ್ರಹ್ಮಾವರ ಶಾಖೆಯ ವ್ಯವಸ್ಥಾಪಕರಾದ ಶ್ರೀ ವಿರೂಪಾಕ್ಷ ನಾಯಕ್‌ರವರು ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಉಪಸ್ಥಿತರಿದ್ದು, ಗಂಗೊಳ್ಳಿ, ಕೊಟೇಶ್ವರ ಹಾಗೂ ಉಪ್ಪುಂದ ಪರಿಸರದ ವಿವಿಧ ಶಿಕ್ಷಣ ಸಂಸ್ಥೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಟ್ಟು **ರೂ. 1,27,600/–** (ರೂ. ಒಂದು ಲಕ್ಷದ ಇಪ್ಪತ್ತೇಳು ಸಾವಿರದ ಆರು ನೂರು ಮಾತ್ರ) ವಿದ್ಯಾರ್ಥಿ ವೇತನವನ್ನು ವಿತರಿಸಿದರು.

ಸಮಾರಂಭದಲ್ಲಿ ಕ್ರೀಡೆ, ಸಂಗೀತ ಹಾಗೂ ಅಬಾಕಸ್ ಸ್ಪರ್ಧೆಯಲ್ಲಿ ಗಣನೀಯ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

**11. ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳು**

ದಿನಾಂಕ 01–07–2023 ರಂದು ಸಂಘದ ಶ್ರೀ ಬೈಲೂರು ಮಂಜುನಾಥ ಶೆಣೈ ಸಭಾಭವನದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು. ಸಮಾರಂಭದಲ್ಲಿ ಗಂಗೊಳ್ಳಿ ಪರಿಸರದಲ್ಲಿ ಸೇವೆ ಸಲ್ಲಿಸುತ್ತಿರುವ 7 ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ದಿನಾಂಕ 06–03–2024 ರಂದು ಸಂಘದ ಶ್ರೀ ಬೈಲೂರು ಮಂಜುನಾಥ ಶೆಣೈ ಸಭಾಭವನದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಅಂಚೆ ಇಲಾಖೆಯ ಸಹಕಾರದೊಂದಿಗೆ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರವನ್ನು ಆಯೋಜಿಸಲಾಗಿತ್ತು. ಸಂಘದ ಕಾರ್ಯವ್ಯಾಪ್ತಿಯ ಎಲ್ಲಾ ಗ್ರಾಮಗಳ 76 ನೂತನ ಆಧಾರ್ ಕಾರ್ಡಗಳ ನೋಂದಣಿ ಸೇರಿದಂತೆ ಒಟ್ಟು 198 ಆಧಾರ್ ಕಾರ್ಡ್‌ಗಳ ನೋಂದಣಿ/ತಿದ್ದುಪಡಿ ಕಾರ್ಯವನ್ನು ಶಿಬಿರದಲ್ಲಿ ಕೈಗೊಳ್ಳಲಾಯಿತು. ಶಿಬಿರವನ್ನು ಗಂಗೊಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಉಮಾಶಂಕರ್ ಎಚ್. ರವರು ಉದ್ಘಾಟಿಸಿದ್ದು, ಉಡುಪಿ ಅಂಚೆ ವಿಭಾಗದ ಅಧೀಕ್ಷಕ ಶ್ರೀ ರಮೇಶ್ ಪ್ರಭು, ಸಹಾಯಕ ಅಂಚೆ ಅಧೀಕ್ಷಕ ಶ್ರೀ ಸತೀಶ್ ಪಿ.ಎನ್ ಸಮಾರಂಭದಲ್ಲಿ ಉಪಸ್ಥಿತರಿದ್ದು ಉಪಯುಕ್ತ ಮಾಹಿತಿ ನೀಡಿದರು.

**12. ಇತರ ಕಾರ್ಯಕ್ರಮಗಳು :**

ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರು 15–03–2024 ರಂದು ಸಂಜೆ 6 ಗಂಟೆಗೆ ಸಂಘದ ಪ್ರಧಾನ ಕಚೇರಿಗೆ ಚಿತ್ತೈಸಿ, ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು ನಿರ್ದೇಶಕರು ಹಾಗೂ ಸಿಬ್ಬಂದಿಗಳನ್ನು ಆಶೀರ್ವದಿಸಿ ಸಂಸ್ಥೆಗೆ ಶುಭಕೋರಿದರು.

**13. 2024–25 ನೇ ವಾರ್ಷಿಕ ಕ್ರಿಯಾ ಯೋಜನೆ :**

ಪ್ರತಿ ಸಾಲಿನಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಆಡಳಿತ ಮಂಡಳಿಯು ಸಮಗ್ರವಾಗಿ ಚರ್ಚಿಸಿ ಹಲವಾರು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದು, ಅವುಗಳನ್ನು ಹಂತ ಹಂತವಾಗಿ ಕಾರ್ಯಗತಗೊಳಿಸುವಲ್ಲಿ ಶ್ರಮಿಸುತ್ತಿದೆ.

**2024–25 ನೇ ಸಾಲಿಗೆ ಆಡಳಿತ ಮಂಡಳಿಯ ಪ್ರಮುಖ ಕ್ರಿಯಾ ಯೋಜನೆಯು ಈ ಕೆಳಗಿನಂತಿದೆ.**

1. ವರ್ಷಾಂತ್ಯದೊಳಗೆ ಸಂಘದ ದುಡಿಯುವ ಬಂಡವಾಳವನ್ನು 100 ಕೋಟಿಯ ಗುರಿ ದಾಟಿಸುವುದು.
2. ಶಾಖಾ ಕಚೇರಿಗಳಲ್ಲಿ ಸದಸ್ಯರ ಹಾಗೂ ಗ್ರಾಹಕರ ಸಭೆ ಏರ್ಪಡಿಸಿ ಶಾಖೆಗಳಲ್ಲಿನ ವ್ಯವಹಾರ ಹೆಚ್ಚಿಸುವ ಕುರಿತು ಪ್ರಯತ್ನಿಸುವುದು.
3. ಸಂಘದ ನಿರ್ದೇಶಕರು ಹಾಗೂ ಸಿಬ್ಬಂದಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಹಾಗೂ ತರಬೇತಿ ಶಿಬಿರಗಳನ್ನು ಆಯೋಜಿಸುವುದು.
4. ಸದಸ್ಯರ ಸಂಖ್ಯೆ 4,000 ತಲುಪುವುದು.
5. ಠೇವಣಿ ಗುರಿ ರೂ. 90 ಕೋಟಿ ತಲುಪುವುದು.
6. ಸಾಲದ ಗುರಿ ರೂ. 80 ಕೋಟಿ ತಲುಪುವುದು.
7. ಲಾಭದ ಗುರಿ ರೂ. 1.60 ಕೋಟಿ ತಲುಪುವುದು.
8. ಸಾಲ ವಸೂಲಾತಿಗೆ ವಿಶೇಷ ಅಭಿಯಾನ ಕೈಗೊಂಡು 100% ಸಾಲ ವಸೂಲಾತಿಗೆ ಪ್ರಯತ್ನಿಸುವುದು.
9. ಸ್ವಸಹಾಯ ಗುಂಪುಗಳ ಸಂಖ್ಯೆಗಳನ್ನು ಹೆಚ್ಚಿಸುವುದು.
10. ನಗದು ವ್ಯವಹಾರವನ್ನು ಕನಿಷ್ಠ ಮಟ್ಟಕ್ಕೆ ತರಲು ಪ್ರಯತ್ನಿಸುವುದು.
11. ಶಾಖಾ ಕಚೇರಿಗಳಿಗೆ ಸ್ವಂತ ನಿವೇಶನವನ್ನು ಖರೀದಿಸುವುದು.
12. ಸಾಮಾನ್ಯ ಸಭೆಯಲ್ಲಿ ಸದಸ್ಯರು ಸೂಚಿಸುವ ಸಂಘದ ಅಭಿವೃದ್ಧಿಗೆ ಪೂರಕವಾಗುವ ಇತರ ಯೋಜನೆಗಳನ್ನು ಪರಿಶೀಲಿಸಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವುದು.

## ಕೃತಜ್ಞತೆಗಳು

ಸಂಘದ ಸದಸ್ಯರ, ಠೇವಣಿದಾರರ ಹಾಗೂ ಗ್ರಾಹಕರ ಬೆಂಬಲ, ಸಲಹೆ, ಸಹಕಾರ, ವಿಶ್ವಾಸಗಳಿಗೆ ನಾವು ಚಿರಋಣಿಗಳಾಗಿದ್ದೇವೆ.

ಸಂಘದ ಅಭಿವೃದ್ಧಿಗೆ ಕಾಲ ಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಆಡಳಿತ ಮಂಡಳಿ ಸದಸ್ಯರು ಹಾಗೂ ಎಲ್ಲಾ ಅಧಿಕಾರಿ ವರ್ಗದವರಿಗೂ ತುಂಬು ಹೃದಯದ ಕೃತಜ್ಞತೆಗಳು.

ಸಂಘದ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಸಹಕಾರ ಸಂಘಗಳ ಉಪ ನಿಬಂಧಕರು, ಸಹಾಯಕ ನಿಬಂಧಕರು ಹಾಗೂ ಎರಡೂ ಕಚೇರಿಯ ಎಲ್ಲಾ ಅಧಿಕಾರಿಗಳಿಗೆ ತುಂಬು ಹೃದಯದ ಕೃತಜ್ಞತೆಗಳು.

ಸಂಘದ ಆರಂಭದಿಂದಲೂ ಮಾರ್ಗದರ್ಶಕರಾಗಿ ಸಹಕರಿಸುತ್ತಿರುವ ಸಹಕಾರ ಸಂಘಗಳ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಅರುಣ್‌ಕುಮಾರ್ ಎಸ್.ವಿ. ಯವರಿಗೆ ಹಾಗೂ ಸಹಾಯಕ ನಿಬಂಧಕರ ಕಚೇರಿಯ ಹಿರಿಯ ನಿರೀಕ್ಷಕರಾದ ಶ್ರೀ ಸುನೀಲ್‌ಕುಮಾರ್‌ರವರಿಗೆ ಸಹಕಾರಿಯ ಪರವಾಗಿ ಕೃತಜ್ಞತೆಗಳು.

ಲೆಕ್ಕ ಪರಿಶೋಧನೆಯ ತಯಾರಿ, ಲೆಕ್ಕ ಪತ್ರಗಳ ನಿರ್ವಹಣೆ ಬಗ್ಗೆ ಮಾಹಿತಿ–ಮಾರ್ಗದರ್ಶನ ನೀಡಿ ಸಹಕರಿಸುತ್ತಿರುವ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಉಡುಪಿ ಇವರಿಗೆ ಹಾಗೂ ಕಚೇರಿಯ ಎಲ್ಲಾ ಅಧಿಕಾರಿಗಳಿಗೆ ಕೃತಜ್ಞತೆಗಳು.

ಸಂಘದ ಸುಗಮ ಆಡಳಿತಕ್ಕೆ ಸಲಹೆಗಳನ್ನು ನೀಡುತ್ತಿರುವ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ಹಾಗೂ ಶ್ರೀಮತಿ ಭಾರತಿ ಜಿ. ಭಟ್, ಮೈಸೂರು ಪ್ರಾಂತೀಯ ಕಚೇರಿಯ ಹಿರಿಯ ಅಧಿಕಾರಿ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾಗಿರುವ ಶ್ರೀ ಅಂಪಾರ್ ಜಗನ್ನಾಥ್ ಶೆಟ್ಟಿಯವರಿಗೆ ಕೃತಜ್ಞತೆಗಳು.

ಸಂಘದ ದೈನಂದಿನ ಕೆಲಸ ಕಾರ್ಯಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿರುವ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್. ಹಾಗೂ ಜಿಲ್ಲಾ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಶ್ರೀ ಲೋಹಿತ್ ಜಿ. ಸಾಲಿಯಾನ್‌ರವರಿಗೆ ಸಂಘದ ಪರವಾಗಿ ಕೃತಜ್ಞತೆಗಳು.

ಸಕಾಲದಲ್ಲಿ ಲೆಕ್ಕ ಪರಿಶೋಧನೆ ನಡೆಸಿದ ಶ್ರೀ ಎ. ಸುದರ್ಶನ್ ಪೈ, ಲೆಕ್ಕ ಪರಿಶೋಧಕರು , ಕೋಟೇಶ್ವರ, ಆಂತರಿಕ ಲೆಕ್ಕ ಪರಿಶೋಧನೆ ನಡೆಸಿ ಸೂಕ್ತ ಸಲಹೆಗಳನ್ನು ನೀಡಿದ ಶೆಟ್ಟಿ ಮತ್ತು ಭಟ್, ಲೆಕ್ಕ ಪರಿಶೋಧಕರು ಉಡುಪಿ, ಆದಾಯ ತೆರಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹಕರಿಸಿದ ಶ್ರೀ ಎನ್. ಶಾಂತಾರಾಮ ನಾಯಕ್, ಲೆಕ್ಕ ಪರಿಶೋಧಕರು, ಕುಂದಾಪುರ, ಜಿ.ಎಸ್.ಟಿ. ವಿಷಯಗಳಲ್ಲಿ ಮಾರ್ಗದರ್ಶನ ನೀಡಿದ ಶ್ರೀ ಭಾರತೀಶ್ ನಾಯಕ್, ಲೆಕ್ಕ ಪರಿಶೋಧಕರು, ವಡೇರಹೋಬಳಿ, ಕುಂದಾಪುರ ಇವರಿಗೆ ಸಂಘದ ಪರವಾಗಿ ಕೃತಜ್ಞತೆಗಳು.

ಸಂಘವು ಬ್ಯಾಂಕ್ ಖಾತೆಗಳನ್ನು ಹೊಂದಿರುವ ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕೃತಜ್ಞತೆಗಳು. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಘದ ಅಭಿವೃದ್ಧಿಗೆ ಸಹಕರಿಸುತ್ತಿರುವ ಎಲ್ಲರಿಗೂ ಕೃತಜ್ಞತೆಗಳು.

**ಜಿ ವೆಂಕಟೇಶ ಶೆಣೈ**
(ಅಧ್ಯಕ್ಷರು)

**ಸದಸ್ಯರ ಗಮನಕ್ಕೆ**

